- - **ಸಿ.ಸಿ. ನಂ.2119/2025**

**ಪಿ. ಡಬ್ಲ್ಯೂ: 1**

**( ಇಂದು ದಿಃ 08/04/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಆರ ಎಸ ಎಮ ವಕೀಲರಿಂದ,**

ನಾನು ಪಿರ್ಯಾದಿ ಸಂಸ್ಥೆಯಲ್ಲಿ ಕಳೆದ 13 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. 2023 ರಿಂದ ನಾನು ಬ್ರಾಂಚ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ. ನಮ್ಮ ಬ್ಯಾಂಕು ಕಾನೂನಿನಡಿಯಲ್ಲಿ ನೊಂದಣಿ ಆಗಿದ್ದು ಆದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆದರೆ ಹಾಜರುಪಡಿಸಬಹುದು. ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಮ್ಮ ಸಂಸ್ಥೆ ನಿರ್ದೇಶಕರ ಮಂಡಳಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸದರಿ ಪ್ರಕರಣ ನಡೆಸಲು ನನಗೆ ನಿರ್ದೇಶಕರ ಮಂಡಳಿಯವರು ಅಧಿಕಾರ ಪತ್ರವನ್ನು ನೀಡಿದ್ದು ಇರುತ್ತದೆ. ಸದರಿ ಅಧಿಕಾರ ಪತ್ರವನ್ನು / ಠರಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಲ್ಲ ಆದರೆ ಹಾಜರುಪಡಿಸಬಹುದು.

ಆರೋಪಿ ಸಾಲ ಪಡೆಯುವಾಗ ನಾನು ಪಿರ್ಯಾದಿ ಸಂಸ್ಥೆಯ ಆ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರಲಿಲ್ಲ. ಸಾಲ ಕಟ್ಟು ಬಾಕಿ ಆದಾಗ ನೊಟೀಸನ್ನು ನೀಡಿದ್ದು ಇರುತ್ತದೆ. ಆರೋಪಿಗೆ 4 ವರ್ಷ ಅವಧಿಗೆ 1 ಲಕ್ಷ ವೈಯಕ್ತಿಕ ಸಾಲವನ್ನು ನೀಡಿರುತ್ತೇವೆ. ರೂ. 5,000 ಶೇರಿನ ಮೊತ್ತ ಹಾಗೂ ರೂ. 5,000 ಅನ್ನು ಎಪ್ ಡಿ ಯನ್ನು ನಮ್ಮ ಬಳಿ ಇಟ್ಟುಕೊಳ್ಳಲಾಗಿದೆ. ನಿಪಿ-6 ಅಧಿಕಾರ ಪತ್ರದ ಮೇಲೆ ಹಿಂದಿನ ಮುಖ್ಯ ಕಾರ್ಯನಿರ್ವಾಹಕರ ಸಹಿ ಇದೆ. ಮುಖ್ಯ ಕಾರ್ಯನಿರ್ವಾಹಕರಿಗೆ ಅಧಿಕಾರ ನೀಡಲು ಅಧಿಕಾರ ಇದೆ. ಆಡಳಿತ ಮಂಡಳಿಯವರು ಮುಖ್ಯ ಕಾರ್ಯನಿರ್ವಾಹಕರಿಗೆ ಅಧಿಕಾರ ಪತ್ರವನ್ನು ನೀಡಲು ಅಧಿಕಾರ ನೀಡಿದ ಬಗ್ಗೆ ದಾಖಲೆ ಇದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ. ಆರೋಪಿಗೆ ಸಾಲವನ್ನು ಮುಂಜೂರು ಮಾಡುವ ಅಧಿಕಾರ ಆಡಳಿತ ಮಂಡಳಿಗೆ ಇದೆ. ಆರೋಪಿಗೆ ಸಾಲವನ್ನು ದಿಃ 05.10.2023 ರಂದು ಮಂಜೂರು ಮಾಡಲಾಗಿತ್ತು. ಸಾಲದ ಅರ್ಜಿಯಲ್ಲಿ ಸಾಲವನ್ನು ದಿಃ 13.10.2023 ರಂದು ಮಂಜೂರಿ ಮಾಡಲಾಗಿದೆ ಎಂದು ನಮೂದು ಇದೆ. ಸಾಲದ ಅರ್ಜಿಯಲ್ಲಿ ವ್ಯಾಪಾರಕ್ಕಾಗಿ ಸಾಲ ನೀಡಿದ ಬಗ್ಗೆ ನಮೂದು ಇದೆ. ಶೇರಿನ ಮೊತ್ತ ಹಾಗೂ ಎಪ ಡಿ ನಮ್ಮ ಬಳಿ ಇದೆ. ಸಾಲ ಕಟ್ಟು ಬಾಕಿ ಆದಾಗ ಆರೋಪಿಗೆ ನೊಟೀಸನ್ನು ನೀಡಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆರೋಪಿ ಈ ಹಿಂದೆ ನಮ್ಮ ಸಂಸ್ಥೆಯಲ್ಲಿ ಸಾಲ ಪಡೆದಿದ್ದರು . ಆ ಬಗ್ಗೆ ದಾಖಲೆಗಳು ಇವೆ.

ಆರೋಪಿಗೆ ನಾವು ಹೇಳಿದ ದಿನಾಂಕಕ್ಕೆ ಯಾವುದೇ ಸಾಲ ಮಂಜೂರು ಮಾಡಿದ್ದೆ ಇಲ್ಲಾ ಎಂದರೆ ಸರಿಯಲ್ಲ. ಆರೋಪಿತನು ಹಿಂದಿನ ಸಾಲದ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಹಿಂದಿನ ಸಾಲದ ದಾಖಲೆಗಳನ್ನು ದುರುಪಯೋಗಪಡಿಸಿ ಸದರಿ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**